ಈವರೆವಿಗೂ ಮೇಲಿನ ಐದು ಹೊಸ ಬಡಾವಣೆಗಳಿಗೆ ಯಾವುದೇ ಜಮೀನನ್ನು ವಶಪಡಿಸಿಕೊಂಡಿರುವುದಿಲ್ಲ.

ಇ) ಪ್ರತಿ ಎಕರೆಗೆ ರೈತರಿಗೆ ನೀಡಿರುವ ಪರಿಹಾರ ಮೊತ್ತವೆಷ್ಟು; ಪರಿಹಾರವಾಗಿ ಶೇ.60–40 ಅನುಪಾತದಲ್ಲಿ ರೈತರಿಗೆ ನಿವೇಶನಗಳನ್ನು ನೀಡಲಾಗುವುದೇ ಅಥವಾ ಪರಿಹಾರ ಮೊತ್ತವನ್ನು ಪೂರ್ಣ ಪ್ರಮಾಣದ ನಗದು ರೂಪದಲ್ಲಿ ನೀಡಲಾಗುವುದೇ; ಈ ಬಗ್ಗೆ ಪರಿಹಾರ ಕ್ರಮದ ವಿವರಗಳನ್ನು ಒದಗಿಸುವುದು;

ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಂಡಿಲ್ಲವಾದ್ದರಿಂದ ಯಾವುದೇ ಪರಿಹಾರವನ್ನು ಈವರೆವಿಗೂ ಭೂಮಾಲೀಕರಿಗೆ ಪಾವತಿಸಿರುವುದಿಲ್ಲ. ಆದರೆ, ಭೂಸ್ವಾಧೀನಕ್ಕೆ ಒಳಪಡುವ ಒಟ್ಟು ಜಮೀನಿನ ಪೈಕಿ ಶೇ.45 ರಷ್ಟು ಭಾಗದಲ್ಲಿ ಮೂಲಭೂತ ಸೌಕರ್ಯ, ಇತ್ಯಾದಿಗಳಿಗೆ ಉಪಯೋಗಿಸಲಾಗುವುದು. ಉಳಿಕೆ ಶೇ.55ರಷ್ಟು ಭಾಗದಲ್ಲಿ ಅಭಿವೃದ್ಧಿಪಡಿಸಲಾಗುವ ಜಮೀನಿನಲ್ಲಿ ಶೇ.40 ರಷ್ಟು ಭಾಗವನ್ನು (ಅಂದರೆ ಪ್ರತಿ ಎಕರೆ ಜಮೀನಿಗೆ 9583 ಚ.ಅಡಿ ಅಭಿವೃದ್ಧಿಪಡಿಸಿದ ನಿವೇಶನವನ್ನು ಅಥವಾ ಪರಿಹಾರ ಧನ ಮತ್ತು ಅಭಿವೃದ್ಧಿಪಡಿಸಿದ ನಿವೇಶನ ಎರಡನ್ನೂ ಪಡೆಯಲು ಅರ್ಹರಿರುತ್ತಾರೆ) ನಿವೇಶನ ರೂಪದಲ್ಲಿ ಭೂಮಾಲೀಕರಿಗೆ ಪರಿಹಾರವಾಗಿ ನೀಡಲಾಗುವುದು. ಉಳಿಕೆ ಶೇ.60 ರಷ್ಟು ಅಭಿವೃದ್ಧಿಪಡಿಸಲಾಗುವ ನಿವೇಶನಗಳು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಭಾಗವಾಗಿದ್ದು, ಅವುಗಳನ್ನು ಸಾರ್ವಜನಿಕರಿಗೆ ಹಂಚಿಕೆ ಮಾಡಲಾಗುವುದು.

ಈ) ಈ ಬಡಾವಣೆಗಳಲ್ಲಿ ನಿರ್ಮಿಸಲಾಗುವ ಒಟ್ಟು ನಿವೇಶನಗಳು ಎಷ್ಟು; ಈ ಪೈಕಿ ಬಡವರಿಗೆ ಹಾಗೂ ಕಡಿಮೆ ಆದಾಯ ಇರುವರಿಗೆ ನೀಡಲಾಗುವ ನಿವೇಶನಗಳು ಎಷ್ಟು; ಮಾಹಿತಿ ನೀಡುವುದು?

5 ಹೊಸ ಬಡಾವಣೆಗಳಲ್ಲಿ ಒಟ್ಟು 1,68,065 ನಿವೇಶನಗಳನ್ನು ರಚಿಸಲು ಉದ್ದೇಶಿಸಲಾಗಿದ್ದು, ಇವುಗಳಲ್ಲಿ 12,000 ನಿವೇಶನಗಳನ್ನು ಬಡವರಿಗೆ ಹಾಗೂ ಕಡಿಮೆ ಆದಾಯ ಇರುವವರಿಗೆ ಹಂಚಿಕೆ ಮಾಡಲು ಉದ್ದೇಶಿಸಲಾಗಿದೆ.

14-11-09

**ಕರ್ನಾಟಕ ವಿಧಾನಸಭೆ**

**357 ಶ್ರೀ ಸಂಪಂಗಿ.ಎನ್(ಬಾಗೇಪಲ್ಲಿ)**

**ಮಾನ್ಯ ನಗರಾಭಿವೃದ್ಧಿ, ಕಾನೂನು, ನ್ಯಾಯ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು**

ಅ) ಚಿತ್ರಾವತಿ ನದಿಗೆ ಅಡ್ಡಲಾಗಿ ಪರಗೋಡು ಹತ್ತಿರ ಕುಡಿಯುವ ನೀರಿಗೆ ಬ್ಯಾರೆಜ್ ನಿರ್ಮಾಣ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಬಂದಿದೆ.

ಆ) ಇದು ಅಂತರರಾಜ್ಯ ವಿವಾದದಲ್ಲಿ ಪ್ರಾರಂಭವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಬಂದಿದೆ.

ಕರ್ನಾಟಕ ರಾಜ್ಯ ಕೋಲಾರ ಜಿಲ್ಲೆಯ ಪರಗೋಡು ಕುಡಿಯುವ ನೀರು ಸರಬರಾಜು ಯೋಜನೆ ಮತ್ತು ಕೆಲವು ಸಣ್ಣ ನೀರಾವರಿ ಯೋಜನೆಗಳ ವಿಷಯದಲ್ಲಿ ಆಂದ್ರಪ್ರದೇಶ ಸರ್ಕಾರವು ದಿನಾಂಕ:14.05.2003 ರಂದು ಸರ್ವೋಚ್ಚ ನ್ಯಾಯಾಲಯದಲ್ಲಿ ಮೂಲ ದಾವೆ ಸಂಖ್ಯೆ:5/2003 ರನ್ನು ಹೂಡಿರುತ್ತದೆ.

ಇ) ಈ ಯೋಜನೆಯು ಪೂರ್ಣ ಪ್ರಮಾಣದಲ್ಲಿ ನಿರ್ಮಾಣ ಆಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಗಡಿನಾಡು ಬಾಗದಲ್ಲಿ ಉಂಟಾದ ಅಂತರ ರಾಜ್ಯ ನೀರಿನ ಹಂಚಿಕೆಯ ಭಿನ್ನಾಭಿಪ್ರಾಯದ ಕಾರಣ ಕೇಂದ್ರ ಜಲ ಆಯೋಗದ ಸೂಚನೆ ಮೇರೆಗೆ ಮೂಲ ಅಂದಾಜಿನಲ್ಲಿ ಅವಕಾಶ ಮಾಡಿದ 137.81 ಎಂ.ಸಿ.ಎಫ್.ಟಿ ಸಾಮರ್ಥ್ಯದ ಜಲಾಶಯದ ಬದಲು 106.15 ಎಂ.ಸಿ.ಎಫ್.ಟಿ ಸಾಮರ್ಥ್ಯಕ್ಕೆ ಜಲಾಶಯವನ್ನು ನಿರ್ಮಿಸಲಾಗಿದೆ.

ಈ) ಈ ಬ್ಯಾರೇಜ್‌ನಲ್ಲಿ ಹೂಳು ತುಂಬಿ ಕುಡಿಯುವ ನೀರಿಗೆ ತೊಂದರೆ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಕುಡಿಯುವ ನೀರು ಪೂರೈಕೆಯಲ್ಲಿ ವ್ಯತ್ಯಯವಿರುವುದಿಲ್ಲ. ಈ ಬ್ಯಾರೇಜ್‌ನಲ್ಲಿ ಹೂಳು ತುಂಬಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಉ) ಹಾಗಿದ್ದಲ್ಲಿ, ಏನು ಕ್ರಮ ಕೈಗೊಳ್ಳಲಾಗಿದೆ;

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಹಾಗೂ ಎರಡು ಸ್ಥಳೀಯ ಸಂಸ್ಥೆಗಳೊಂದಿಗೆ ಚರ್ಚಿಸಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಊ) ಈ ಬ್ಯಾರೇಜ್ ಸುತ್ತಮುತ್ತ ರಕ್ಷಣೆ ಇಲ್ಲದೆ ಅನೇಕರು ಇಲ್ಲಿ ಈಜಾಡಲು ಹೋಗಿ ಪ್ರಾಣ ಕಳೆದುಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ ಇಲಾಖೆಗೆ ಮಾಹಿತಿ ಬಂದಿರುವುದಿಲ್ಲ.

ಋ) ಹಾಗಿದ್ದಲ್ಲಿ, ಈ ಸಂಬಂಧ ಏನು ಕ್ರಮ ಕೈಗೊಳ್ಳಲಾಗಿದೆ?

ಸ್ಥಳೀಯ ಸಂಸ್ಥೆಗಳು ಕ್ರಮ ಕೈಗೊಳ್ಳಬೇಕಾಗಿದೆ.

<u>ಕರ್ನಾಟಕ ವಿಧಾನ ಸಭೆ</u>

**358 ಶ್ರೀಸಂಪಂಗಿ.ಎನ್(ಬಾಗೇಪಲ್ಲಿ)**

**ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳ ಮತ್ತು ಸಾರ್ವಜನಿಕ ಉದ್ದಿಮೆಗಳ ಸಚಿವರು**

ಅ) ನಂಜುಂಡಪ್ಪ ವರದಿಯಂತೆ ಬಾಗೇಪಲ್ಲಿ ಪಟ್ಟಣವು ಅತಿ ಹಿಂದುಳಿದ ಪ್ರದೇಶವಾಗಿರುವುದು ಸರ್ಕಾರಕ್ಕೆ ಬಂದಿದೆಯೇ;